ಇವರ್‍ಯಾರೂ ನನಗೆ ಬರೆಯುವ ಹೊತ್ತಲ್ಲಿ ಎದುರು ಕೂತಿದ್ದಿಲ್ಲ; ನಿರ್ದೇಶಿಸಿದ್ದಿಲ್ಲ. ಬರವಣಿಗೆ ನನಗೆ ಆಕಸ್ಮಿಕವಲ್ಲ. ನನಗೆ ಇನ್ನೇನಾಗಲೂ ಸಾಧ್ಯವಿರಲಿಲ್ಲ. ಶಿಕ್ಷಕರಾಗಿದ್ದ ಅಪ್ಪ, ಎಲ್ಲ ಶಿಕ್ಷಕರೂ ಮಾಡುವಂತೆ, ಮೂರನೇ ವರ್ಷಕ್ಕೆ ಒಂದನೆಯ ತರಗತಿಗೆ ಸೇರಿಸಿದ್ದರು. ದೊಡ್ಡ ಹುಡುಗರ ಜತೆ ಗುಬ್ಬಚ್ಚಿಯಂತಿದ್ದ ನಾನು, ಅವರು ಈಜಿಗೆ ಬಾವಿಗೆ ಧುಮುಕಿದರೆ; ಕಬಡ್ಡಿ ಆಟಕ್ಕಿಳಿದರೆ; ಅವರ ಬಟ್ಟೆಗಳನ್ನು ಇರುಕಿ ನಿಲ್ಲುವ; ಆವರಣ ಮೀರಿದ ಚೆಂಡನ್ನು ಓಡಿ ಹೋಗಿ ತಂದುಕೊಡುವ ಸಹಾಯಕನಂತಿದ್ದೆ. ಈ ಬಗ್ಗೆ ಸಿಟ್ಟಿತ್ತು. ದೈಹಿಕವಾಗಿ ಕುಳ್ಳಗೆ, ಸಣ್ಣಗಿದ್ದ ನನಗೆ ಇದನ್ನು ಮೀರಲು ಇದ್ದ ಏಕೈಕ ಮಾರ್ಗ ಮನೋಬಲವನ್ನಾಧರಿಸಿದ ಕಥಾಭಿವ್ಯಕ್ತಿ. ಆ ಕಾಲಕ್ಕೆ ಅಪ್ಪಅಮ್ಮ ಇಬ್ಬರೂ ಶಿಕ್ಷಕರಾಗಿದ್ದರಿಂದ ವರ್ಣಮಾಲೆ, ಒಳ್ಳೆಯ ಕೈಬರಹ ಒಲಿದಿತ್ತು. ಕಥಾವಸ್ತುವಿನ ಜಾಡು ಹಿಡಿದು ಓಡಲು – ಓಡಲು ಎಂಬುದನ್ನು ಅಕ್ಷರಶಃ ಬಳಸಿದ್ದೇನೆ– ನನಗೆ ಸ್ವಾನುಭವ ಮಾತ್ರವಲ್ಲ, ಸ್ವಾವಲಂಬಿತನವೂ ಕಾರಣವಾಯ್ತು. ಹೆದ್ದಾರಿಗುಂಟ ಮೈಲಿಗಲ್ಲು ಬರೆದು ಅಕ್ಷರಕ್ಕೆ ಇಪ್ಪತ್ತೈದು ಪೈಸೆ ಸಂಭಾವನೆ ಪಡೆಯುವುದು, ಅಂಗಡಿಗಳ ನಾಮಫಲಕ ಬರೆಯುವುದು, ಥಿಯೇಟರ್‌ಗಳಲ್ಲಿ ಗೇಟ್‌ಕೀಪರನಿಂದ ಮೊದಲ್ಗೊಂಡು ನಾನಾ ಬಗೆಯ ಕೆಲಸ, ಡೈರಿಯಲ್ಲಿ ದಿನಗೂಲಿ... ಇಂಥ ದಶಾವತಾರದ ದೆಸೆಯಿಂದಲೇ ನನ್ನ ಕಥೆಗಳು ಜನ್ಮ ತಾಳುತ್ತಿದ್ದವು. ಸ್ವಾನುಭವದ ಶೋಧನೆಯ ಜತೆ, ಪರಾನುಭವಗಳ ಪರಕಾಯ ಪ್ರವೇಶ ಇವೆರಡೂ ಆ ಕಥೆಗಳಲ್ಲಿ ದಟ್ಟವಾಗಿವೆ. ಗಣಿತ – ವಿಜ್ಞಾನಗಳನ್ನು ದಾಟಲಾರದೆ ಫೇಲಾಗಿ ಅವಮಾನಿತನಾದ ನಾನು ಕನ್ನಡ ಮಾಧ್ಯಮ, ಕನ್ನಡ – ಇತಿಹಾಸ – ಸಮಾಜಶಾಸ್ತ್ರ ವಿಷಯಗಳ ಅಧ್ಯಯನ ಇವೆರಡರಿಂದ ವೇದಿಕೆಯೊಂದನ್ನು ನಾನೇ ಸೃಷ್ಟಿಸಿಕೊಂಡೆ. ಬರೆಯುವ ವ್ಯಸನಕ್ಕೆ ಬೇಗ ಅಂಟಿಕೊಂಡೆ. ಬಾಗಿಲು ಹಾಕಿಕೊಂಡು ಗಂಟೆಗಟ್ಟಲೆ ಬರೆಯುತ್ತಿದ್ದ ನನಗೆ ಒಂದು ಐಡೆಂಟಿಟಿ ಬೇಕಿತ್ತು. ಗೆಳೆಯ ಜೇಬರ್ 'ನನ್ನ ಪ್ರೀತಿಯ ಹುಡುಗನಿಗೆ' ಕಥಾಸಂಕಲನದ ಹಿನ್ನುಡಿಯಲ್ಲಿ 'ಯಾರಲ್ಲೂ ಬೆರೆಯಲಾಗದ ಹಿಂಜರಿಕೆಗಳನ್ನೂ ಏಕಾಂತವನ್ನೂ ಕೊಲ್ಲಲು ಕಥೆ ಬರೆದ. ಮೆದುಮಾತಿನ ತನ್ನಷ್ಟಕ್ಕೆ ತಾನೇ ಮುದುರಿಕೊಳ್ಳುತ್ತಿದ್ದ ಈ ಹುಡುಗನ ಬಗ್ಗೆ ಸುತ್ತಲಿದ್ದ ಮೈಸೂರಿಗರಿಗೆ ಅರಿವೇ ಇರಲಿಲ್ಲ' ಎಂದು ಬರೆದಿದ್ದು ಭಾಗಶಃ ಸರಿಯಾಗಿತ್ತು. ಒಳಗೊಳಗೇ ಇದ್ದ ತುಂಟತನ, ದಂಗೆಕೋರತನ, ಸಿಟ್ಟು ಕಥೆಗಳಲ್ಲಿ ಎದ್ದು ಕುಣಿಯುತ್ತಿದ್ದವು. ಎದುರಿಗೆ ಸಿಕ್ಕವರು 'ಈ ಅಮಾಯಕ ಹುಡುಗ ಇಂಥ ಕಥೆಗಳನ್ನು ಬರೆಯೋಕೆ ಸಾಧ್ಯವೇ ಇಲ್ಲ' ಎನ್ನುವಂತಿದ್ದೆ. ಬಿಸಿಲು, ದೂಳು, ದಿನಗೂಲಿ ಮುಂತಾದ ಶ್ರಮಿಕ ಆವರಣಕ್ಕೆ ಹೋಗಿದ್ದರಿಂದಲೇ 'ಹದ್ದುಗಳು', 'ಛಿದ್ರ', 'ಸೆಕೆಂಡ್ ಡಿವಿಜನ್ ಕ್ಲರ್ಕಿನ ಸಾವಿನ ಉತ್ತರಾರ್ಧ', 'ಮುತ್ತಾಲಯ್ಯನ ರಾಜೀನಾಮೆ ಪ್ರಸಂಗ', '12155', 'ಕಮಂಗಿಪುರದ ಕಥೆ', 'ಹುಡ್ಕೋ ಮನೆ ಹುಡುಕೋ', 'ಸನ್ನಿಧಿ', 'ಯಶೋಧರ ಚರಿತೆ', 'ವಿಶ್ವ', 'ಮನೆಗೆ ಬಂದ ಮಹಾಲಕ್ಷ್ಮಿ'ಯಂಥ ಕಥೆಗಳು ಜನ್ಮ ತಾಳಿದವು. ಆ ಶ್ರಮಿಕ ಬದುಕಿಗೆ ಕೃತಜ್ಞ.

ಈಗ ದೂರ ನಿಂತು ನೋಡಿದರೆ ಅಸಮಾನತೆ, ತಾರತಮ್ಯಗಳನ್ನು ತಿರಸ್ಕರಿಸಲು ನನ್ನ ತರುಣ ಮನಸ್ಸು ಪ್ರಯತ್ನಿಸುತ್ತಿತ್ತು ಎನಿಸುತ್ತದೆ. ದೇವರು ಮತ್ತು ಧರ್ಮಗಳು, ಸಾಮ್ರಾಜ್ಯಗಳು ವಂಚನೆ ಮತ್ತು ಪಾಪದ ಮೇಲೆ ನಿಂತಿವೆ. ಈ ವೈರುಧ್ಯಗಳನ್ನು ಸೃಜನಶೀಲವಾಗಿ ದಾಖಲಿಸಬೇಕು. ಗಾಯಗೊಂಡವನಂತೆ, ಏಕಾಂಗಿಯಾಗಿದ್ದ ನನಗೆ ಕಥೆಗಳೆಂದರೆ ಕಾಯಕಲ್ಪ, ತಿದ್ದುಪಡಿ, ಚಿಕಿತ್ಸೆ ಮತ್ತು ಅನಿವಾರ್ಯ ಮಾರ್ಗದಂತೆ ಗೋಚರಿಸುತ್ತಿದ್ದವು.

ನನ್ನ ಮುಖ ಪರಿಚಯವೇ ಇಲ್ಲದೆ ಕಥೆಗಳನ್ನು ಅಚ್ಚಿಸುತ್ತಿದ್ದ ಎಂ.ಬಿ. ಸಿಂಗ್, ಈಶ್ವರಯ್ಯ,